**ಓ.ಎಸ್. ನಂ. 323/2019 ಡಿ.ಡಬ್ಲೂ-1 ಹೆಸರು - ವೆಂಕಟಶೆಟ್ಟಿ**

**ಸಾಕ್ಷಿಯನ್ನು ದಿನಾಂಕಃ 11/01/2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಸ್.ಎಸ್. ವಾದಿ ಪರ ವಕೀಲರಿಂದಃ-**

ನನ್ನ ತಂದೆಯ ಹೆಸರು ಸಣ್ಣ ಶೆಟ್ಟಿ. ವಾದಿಯ ತಂದೆಯ ಹೆಸರು ಕೂಡ ಸಣ್ಣಶೆಟ್ಟಿ ಎಂದರೆ ಸರಿ. ನಾನು ಮತ್ತು ಪ್ರತಿವಾದಿ ಒಂದೇ ಜಾತಿಯವರು. ನಾನು ಅಂಬಳೆ ಗ್ರಾಮದಲ್ಲಿ ಹುಟ್ಟಿ ಬೆಳೆದಿರುತ್ತೇನೆ. ವಾದಿ ನಿಮಗೆ ಎಷ್ಟು ವರ್ಷಗಳಿಂದ ಪರಿಚಯ ಎಂದು ಕೇಳಿದ್ದಕ್ಕೆ ಸಾಕ್ಷಿಯು ವಾದಿಯು ತನ್ನ ಮಗಳನ್ನು ನಮ್ಮ ಊರಿಗೆ ನೀಡಿ ಮದುವೆ ಮಾಡಿದ್ದು ಆಗಿನಿಂದ ಅಂದರೆ ಸುಮಾರು 15 ವರ್ಷಗಳಿಂದ ಗೊತ್ತಿರುತ್ತಾರೆ. ವಾದಿ ಏನು ಕೆಲಸ ಮಾಡುತ್ತಾರೆ ಎಂದು ನನಗೆ ಗೊತ್ತಿಲ್ಲ. 1968 ರಿಂದ ವಾದಿ ಅವರ ತಂದೆ ದಾವಾ ಸ್ವತ್ತನ್ನು ಖರೀದಿ ಮಾಡಿದಾಗಿನಿಂದ ಅಂಬಳೆ ಗ್ರಾಮದಲ್ಲಿಯೇ ವಾಸವಿದ್ದಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲಾತಿಗಳು ವಾದಿಯ ಹೆಸರಿನಲ್ಲಿಯೇ ಇದೆ ಎಂದರೆ ಸರಿಯಲ್ಲ.

ವಾದಿಯು ಸೊಪ್ಪು ಮತ್ತು ತರಕಾರಿ ವ್ಯಾಪಾರಕ್ಕೆ ಮೈಸೂರಿಗೆ ಓಡಾಡುತ್ತಿದ್ದುದರಿಂದ ಮತ್ತು ನನ್ನ ಮತ್ತು ವಾದಿಯ ತಂದೆಯ ಹೆಸರು ಒಂದೇ ಆಗಿರುವುದರಿಂದ ಅದನ್ನು ದುರುಪಯೋಗ ಪಡಿಸಿಕೊಂಡು ದಾವಾ ಸ್ವತ್ತು ನನ್ನದು ಸುಳ್ಳು ಕ್ಲೇಮು ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ದಾವಾ ಸ್ವತ್ತು ಮನೆ ಜಾಗ ಎಂದರೆ ಸರಿ. ನನ್ನ ತಂದೆಗೆ ಇಬ್ಬರು ಮಕ್ಕಳು, ನಾನು ಮತ್ತು ನನ್ನ ತಂಗಿ. ನಮ್ಮ ಕುಟುಂಬದ ವಂಶವೃಕ್ಷ ಹಾಜರುಪಡಿಸಿಲ್ಲ. ನಿಡಿ-1 ದಾಖಲೆಯು 1996-97 ನೇ ಸಾಲಿನದ್ದು ಎಂದರೆ ಸರಿ. ಕಂದಾಯ ಪಾವತಿ ರಶೀದಿಗಳು 1997 ಮತ್ತು 98 ನೇ ಸಾಲಿನವು ಎಂದರೆ ಸರಿ. ಹೊಸ ಅಸಸ್ ಮೆಂಟ್ ಹಾಜರುಪಡಿಸಲು ತೊಂದರೆ ಇಲ್ಲ. ನಾನು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇರದ ಕಾರಣ ಇತ್ತೀಚಿನ ಸಾಲಿನ ಅಸಸ್ ಮೆಂಟ್ ನಕಲನ್ನು ಹಾಜರುಪಡಿಸಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನ್ನ ತಂದೆ ಅಸಸ್ ಮೆಂಟ್ ಮಾಡಿಸಿದ್ದರು ಎಂದು ನುಡಿಯುತ್ತಾರೆ. ನನ್ನ ತಂದೆ ತೀರಿಹೋಗಿ 10-12 ವರ್ಷ ಆಗಿದೆ. ನನ್ನ ತಂದೆ ತೀರಿಹೋದ ನಂತರ ಖಾತೆ ಬದಲಾವಣೆಗೆ ಅರ್ಜಿ ನೀಡಿಲ್ಲ. ನಾನು ಹಾಜರುಪಡಿಸಿರುವ ನಿಡಿ-2 ರಿಂದ ನಿಡಿ-14 ದಾಖಲೆಗಳು ದಾವಾ ಸ್ವತ್ತಿಗೆ ಸಂಬಂಧಪಟ್ಟ ದಾಖಲಾತಿಗಳಲ್ಲ ಎಂದರೆ ಸರಿಯಲ್ಲ.

ಈ ದಾವೆ ಸಲ್ಲಿಸಿದ ನಂತರ ಖಾತೆ ಬದಲಾವಣೆಗೆ ಅರ್ಜಿ ಸಲ್ಲಿಸಿದ್ದೀರಾ ಎಂದು ಕೇಳಿದ ಪ್ರಶ್ನೆಗೆ ಸಾಕ್ಷಿಯು ಇಲ್ಲ ಎಂದು ನುಡಿಯುತ್ತಾರೆ. ನಿಡಿ-25 ಕ್ರಯ ಪತ್ರ ದಾವಾ ಸ್ವತ್ತಿಗೆ ಸಂಬಂಧಪಟ್ಟದ್ದಲ್ಲ. ಸಾಕ್ಷಿ ಮುಂದುವರೆದು ಅದು ನಮ್ಮ ಜಮೀನು ಖರೀದಿಗೆ ಸಂಬಂಧಪಟ್ಟದು ಎಂದು ನುಡಿಯುತ್ತಾರೆ. ವಾದಿ ಕಳುಹಿಸಿದ್ದ ವಕೀಲರ ನೋಟೀಸ್ ಗೆ ನಾನು ಉತ್ತರ ನೀಡಿಲ್ಲ ಎಂದರೆ ಸರಿ.

ವಾದಿಯು ದಾವಾ ಸ್ವತ್ತಿನ ಸ್ವಾಧೀನದಲ್ಲಿ ಇದ್ದು, ನನ್ನ ತಂದೆ ಮತ್ತು ವಾದಿಯ ತಂದೆಯ ಹೆಸರು ಒಂದೇ ಇರುವುದರಿಂದ ಅದನ್ನು ದುರುಪಯೋಗ ಪಡಿಸಿಕೊಂಡು ವಾದಿಯ ಸ್ವಾಧೀನಕ್ಕೆ ತೊಂದರೆ ನೀಡುತ್ತಿದ್ದೇನೆ ಎಂದರೆ ಸರಿಯಲ್ಲ. ನಿಡಿ-16 ರಿಂದ 20 ದಾವಾ ಸ್ವತ್ತಿಗೆ ಸಂಬಂಧಪಟ್ಟದಲ್ಲ ಎಂದರೆ ಸರಿಯಲ್ಲ.

( ಮುಂದುವರೆದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.)

ನನ್ನ ಉಕ್ತಲೇಖನದ ಮೇರೆಗೆ ತೆರದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.

**ಓ ಹೇ ಕೇ ಸ ಇದೆ ಎಂ ಒ**

ಸಹಿ/-

1 **ನೇ ಹೆಚ್ಚುವರಿ ಸಿ.ಜೆ ಮತ್ತು ಪ್ರದನ್ಯಾದಂ**

**ನಂಜನಗೂಡು**